ಚೆನ್ನಾಗಿರುತ್ತಿತ್ತೇನೋ.'

ಅವನ ಹೆಜ್ಜೆಗಳು ನಿಧಾನವಾದವು. ಅವನು ಇನ್ನೇನು ಮರಳಿ ಹೋಗುವನೇನೋ ಎಂಬಂತೆ ಕಾಣಿಸಿದ. ಕೆಡುಕಿನ ಅಸ್ಪಷ್ಟ ಮುನ್ಸೂಚನೆಯೊಂದು ಅವನನ್ನು ಆಕ್ರಮಿಸಿಕೊಂಡಿತು. ದೃಢನಿಶ್ಚಯದಿಂದ ಅದನ್ನವನು ಕೊಡವಿ, ಹಳ್ಳಿಯ ದಿಕ್ಕಿನಲ್ಲಿ ನಡಿಗೆಯನ್ನು ಮುಂದುವರಿಸಿದ. ಆದರೆ, ಅವನ ಮುಖದಲ್ಲಿ ಮಾತ್ರ ಕ್ಷೋಭೆ ಇನ್ನೂ ಉಳಿದಿತ್ತು. ಅರೆ ತೃಪ್ತಿಗೊಂಡ ವ್ಯಕ್ತಿಯಂತೆ, ಒಂದೆರಡು ಬಾರಿ ತನ್ನ ತಲೆಯನ್ನು ಅಲ್ಲಾಡಿಸಿದ.

ಹರ್ಕ್ಯುಲ್ ಪ್ವರೊ ಹ್ಯಾರಿಸನ್‌ನ ಕೈದೋಟದ ಬಾಗಿಲಿಗೆ ಮರಳಿ ಬಂದಾಗ ಒಂಬತ್ತು ಗಂಟೆಗೆ ಇನ್ನೂ ಕೆಲವು ನಿಮಿಷಗಳಿದ್ದವು. ಅದೊಂದು ನಿರ್ಮಲಾಕಾಶದ ಶಾಂತ ಸಂಜೆಯಾಗಿತ್ತು. ಎಲೆಗಳನ್ನು ಅಲುಗಿಸುವಷ್ಟು ಗಾಳಿಯೂ ಬೀಸುತ್ತಿರಲಿಲ್ಲ. ಬಿರುಗಾಳಿಯ ಮುಂಚಿನ ನಿರ್ವಾತದಂತೆ, ಆ ಸ್ಥಿರತೆಯಲ್ಲಿ ಅಪಶಕುನವೊಂದು ಇದ್ದಂತಿತ್ತು. ಪ್ವರೊನ ಹೆಜ್ಜೆಗಳ ಬಿರುಸು ಹೆಚ್ಚಿತು. ಇದ್ದಕ್ಕಿದ್ದ ಹಾಗೆ ಅವನಲ್ಲಿ ತಳಮಳ ಮತ್ತು ಅನಿಶ್ಚಿತತೆ ಮೈದಾಳಿ, ಅವನಿಗರಿವಿಲ್ಲದೆಯೇ ಅವನು ಹೆದರಿದ. ಅದೇ ಸಮಯದಲ್ಲಿ ಕೈದೋಟದ ಬಾಗಿಲು ತೆಗೆದು ಕ್ಲಾಡ್ ಲ್ಯಾಂಗ್ಟನ್ ರಸ್ತೆಗಿಳಿದ. ಅವನು ಪ್ವರೊನನ್ನು ನೋಡಿ ಹೇಳಿದ.

'ಓ ಗುಡ್ ಈವ್ನಿಂಗ್.'

'ಗುಡ್ ಈವ್ನಿಂಗ್, ಮಸ್ಯೂರ್ ಲ್ಯಾಂಗ್ಟನ್. ನೀನು ಬೇಗ ಬಂದಿರುವಂತಿದೆ?'

ಲ್ಯಾಂಗ್ಟನ್ ದಿಟ್ಟಿಸಿ ನೋಡಿದ, 'ನೀನು ಹೇಳುತ್ತಿರುವುದೇನೂ ನನಗೆ ಅರ್ಥವಾಗುತ್ತಿಲ್ಲ.'

'ಕಣಜದ ಗೂಡನ್ನು ನಾಶ ಮಾಡಿಯಾಯಿತಾ?'

'ಇಲ್ಲ.'

'ಓ!' ಪ್ವರೊ ಮೆಲುವಾಗಿ ಹೇಳಿದ. 'ನೀನು ಕಣಜದ ಗೂಡನ್ನು ನಾಶ ಮಾಡಿಲ್ಲವಾದರೆ ಮತ್ತೇನು ಮಾಡಿದೆ?'

'ಹ್ಯಾರಿಸನ್ ಜೊತೆ ಕುಳಿತು ಸುಮ್ಮನೆ ಕಾಲಹರಣ ಮಾಡಿದೆ. ನಾನು ಬೇಗ ಹೋಗಬೇಕು, ಮಸ್ಯೂರ್ ಪ್ವರೊ. ನಮ್ಮಂತಹ ಸಣ್ಣ ಊರಿನಲ್ಲಿ ನೀನು ಉಳಿದುಕೊಳ್ಳುತ್ತೀಯಾ ಎಂಬುದರ ಕಲ್ಪನೆಯೇ ನನಗಿರಲಿಲ್ಲ.'

'ನನಗಿಲ್ಲಿ ಸ್ವಲ್ಪ ಕೆಲಸವಿತ್ತು.'

'ಹ್ಯಾರಿಸನ್‌ನನ್ನು ನೀನು ಮಹಡಿಯ ಮೇಲೆ ನೋಡಬಹುದು. ನಾನು ಇಲ್ಲಿ ಉಳಿದುಕೊಳ್ಳಲಾಗದಿರುವುದಕ್ಕೆ ನನ್ನನ್ನು ಕ್ಷಮಿಸು.'

ಅವನು ಆತುರದಲ್ಲಿ ಹೆಜ್ಜೆ ಹಾಕಿದ. ಪ್ವರೊ ಅವನೆಡೆ ನೋಡಿದ, 'ಧೈರ್ಯವಿಲ್ಲದ ಯುವಕ. ನೋಡೊದಕ್ಕೆ ಚೆನ್ನಾಗಿದ್ದಾನೆ. ಆದರೆ, ಬಾಯಿ ಹರುಕ.'

'ಹಾಗಾದರೆ ಹ್ಯಾರಿಸನ್‌ನನ್ನು ಮಹಡಿಯ ಮೇಲೆ ನೋಡಬಹುದಾ' ಎಂದು ಪ್ವರೊ ಪಿಸುಗುಟ್ಟಿದ. 'ನನಗೇನೋ ಇದೆಲ್ಲಾ ಆಶ್ಚರ್ಯವೆನಿಸುತ್ತಿದೆ' ಎಂದುಕೊಂಡು ಕೈದೋಟದ ಬಾಗಿಲಿನ ಮೂಲಕ ಒಳನಡೆದ. ಹ್ಯಾರಿಸನ್ ಮೇಜಿನ ಬಳಿಯಿರುವ ಕುರ್ಚಿಯಲ್ಲಿ ಅಲುಗಾಡದೆ ಕುಳಿತಿದ್ದ. ಪ್ವರೊ ಹತ್ತಿರ ಬಂದರೂ ಅವನ ಕಡೆ ತಿರುಗಿ ನೋಡಲಿಲ್ಲ.

'ಹಾ! ಮೊನೊಮಿ, ಚೆನ್ನಾಗೆ ಇದ್ದೀಯಲ್ಲಾ?' ಪ್ವರೊ ಕೇಳಿದ.

ಅವರ ನಡುವೆ ದೀರ್ಘವಾದ ವಿರಾಮವಿತ್ತು. ನಂತರ ಹ್ಯಾರಿಸನ್ ಗೊಂದಲದ ಧ್ವನಿಯಲ್ಲಿ ಹೇಳಿದ. 'ನೀನು ಹೇಳಿದ್ದೇನು?'

'ನೀನು ಚೆನ್ನಾಗಿದ್ದೀಯಾ ಎಂದು ಕೇಳಿದೆ.'